ಹಾಸಿನ ಮೇಲೆ ಕುಳಿತುಕೊಂಡರು. ಕೆಲ ಕ್ಷಣ ಮೌನ ಆವರಿಸಿತು. ಅವಳು ಅಲ್ಲಿನ ರಮ್ಯ ಪರಿಸರವನ್ನು ಕಣ್ಣಿಗೆ ತುಂಬಿಕೊಳ್ಳುತ್ತಿದ್ದಳು. ಆ ಹೊತ್ತು ಅವನು ಅವಳನ್ನು ಹತ್ತಿರದಿಂದ ಗಮನಿಸಿದ. ಅವಳು ದೃಷ್ಟಿ ಹೊರಳಿಸಿ ಅವನ ನೋಟವನ್ನು ಗಮನಿಸಿ ಮಂದಹಾಸ ಬೀರಿದಳು. ಅವನು ಮುಖ ಕೆಳಕ್ಕೆ ಹಾಕಿದ.

'ಇಲ್ಲಿನ ಪರಿಸರ ಎಷ್ಟು ಚೆನ್ನಾಗಿದೆಯಲ್ಲಾ' ಎಂದಾಗ ಅವನು,

'ಹೌದು, ಇಂಥ ಸುಂದರವಾದ ಜಾಗದಲ್ಲಿ ನಾನು ನಿಮ್ಮನ್ನ ಈ ಜನ್ಮದಲ್ಲಿ ಮತ್ತೆ ಭೇಟಿ ಆಗತಿನೊ ಇಲ್ವೊ ಅನ್ಕೊಂಡಿದ್ದೆ. ಇದು ಕನಸೊ ನನಸೊ ಅನ್ನೋಹಾಗಾಗಿದೆ' ಎಂದ.

ಅವಳು ಮುಗುಳ್ನಕ್ಕು, 'ಕಾಲುಗಳನ್ನ ನೆಲಕ್ಕೆ ಹಚ್ಚದೆ ಕನಸಿನ ಲೋಕದಲ್ಲಿ ವಿಹರಿಸೋದು ನಿಮ್ಮ ಸ್ವಭಾವ. ಅಥವಾ, ಅದು ನಿಮ್ಮ ದೌರ್ಬಲ್ಯವೂ ಆಗಿರಬಹುದು. ನಮ್ಮ ಕನಸುಗಳು ಎಷ್ಟು ಸುಂದರವಾಗಿದ್ರೂ ನಾವು ನೆಲದ ಮೇಲೆ ಇದ್ದೀವಿ ಅನ್ನೋ ವಾಸ್ತವ ಪ್ರಜ್ಞೆಯನ್ನ ಕಳಕೊಬಾರದು ಮೋಹನ್ ಅವ್ರೆ. ಅಷ್ಟಕ್ಕೂ ಇನ್ನೊಂದು ಜನ್ಮದಲ್ಲಿ ನಂಬಿಕೆ ಇಲ್ಲದವ್ಳು ನಾನು. ಅದೇನು ಆಗಬೇಕಿದೆಯೋ ಎಲ್ಲ ಇದೇ ಜನ್ಮದಲ್ಲಿ ಆಗಬೇಕು' ಎಂದಳು.

'ನಿಜಾ ನಿಜಾ, ಅಸಾಧ್ಯ ಅನಿಸಿದ್ದು ಮತ್ತೆ ಇದೇ ಜನ್ಮದಲ್ಲಿ ಸಾಧ್ಯ ಆಯ್ತಲ್ಲ ಅಂತ ಖುಷಿಯಾಗತಿದೆ.'

'ಹೂಂ, ಸರಿ ನನ್ನ ಮತ್ತೆ ಭೇಟಿ ಮಾಡಬೇಕು ಅಂತ ನೀವು ಅನುಭವಿಸ್ತಿದ್ದ ಸಂಕಟ ಕೇಳಕಾಗದೇ ನಾನೇ ಈ ನಿರ್ಧಾರ ತೊಗೊಂಡೆ. ಈಗ ಏನೇನು ಹೇಳಬೇಕು ಅನಿಸ್ತದೊ ಎಲ್ಲಾ ಹೇಳಿಕೊಂಡುಬಿಡಿ.'

'ಅದ್ಯಾಕೊ ಗೊತ್ತಾಗತಿಲ್ಲ. ನೀವು ದೂರ ಇದ್ದಾಗ ನಿಮ್ಮ ಜೊತೆ ಏನೇನೊ ಮಾತಾಡಬೇಕು. ಏನೇನೋ ಹೇಳಬೇಕು ಅನಿಸ್ತಿರತದೆ. ಈಗ ನೀವು ಎದುರಿದ್ದಾಗ ಏನು ಮಾತಾಡಬೇಕು ಅನ್ನೋದೇ ಗೊತ್ತಾಗತಿಲ್ಲ.'

'ಯಾಕೆ ನನ್ನ ನೋಡಿದ ಕೂಡಲೇ ನಿಮ್ಮ ಮೆದುಳು ಕೆಲಸನೇ ಮಾಡ್ತಿಲ್ವಾ? ಸರಿ ಸ್ವಲ್ಪ ಹೊತ್ತು ಯೋಚನೆ ಮಾಡಿ ಹೇಳಿ. ನನಗೇನೂ ಬೇಜಾರಿಲ್ಲ.'

ಮೋಹನ ಏನು ಮಾತನಾಡಬೇಕೆಂಬ ಗೊಂದಲಕ್ಕೊಳಗಾಗಿ ಯೋಚಿಸಿದ. ಅವಳು ಅವನ ಮುಖವನ್ನೇ ಗಮನಿಸಿದಳು. ಬಳಿಕ ಅವನು ಅವಳ ಮುಖವನ್ನು ಗಮನಿಸಿ,

'ನೀವು ಈ ಡ್ರೆಸ್‌ನಲ್ಲಿ ತುಂಬಾ ಚೆನ್ನಾಗಿ ಕಾಣ್ತಿದ್ದೀರಿ. ಅಲ್ಲದೇ ಈ ಹೇರ್ ಸ್ಟೈಲ್ ಕೂಡ ತುಂಬಾನೇ ಇಷ್ಟಾ ಆಯ್ತು' ಎಂದ.

ಅದನ್ನು ಕೇಳಿ ಮೇದಿನಿ ಮತ್ತೆ ನಕ್ಕಳು. 'ಥ್ಯಾಂಕ್ ಯು... ಅಲ್ಲಾ ಇದನ್ನ ಹೇಳೋದಕ್ಕೆ ಇಷ್ಟೊಂದು ಹಿಂಜರಿಕೆನಾ... ನೀವೂ ಕೂಡ ಅವತ್ತಿಗಿಂತ ಇವತ್ತು ಸ್ಮಾರ್ಟಾಗಿ ಕಾಣ್ತಿದ್ದೀರಿ' ಎಂದಳು.

ಅವನು ಮುಗುಳ್ನಕ್ಕು, 'ಅಲ್ಲಾ ಅದು, ನೀವು ಹೇಳಿದ್ರಲ್ಲ, ನಾನು ನಿಮ್ಮಿಂದ ಸ್ನೇಹಕ್ಕೂ ಮಿಗಿಲಾಗಿ ಇನ್ನೇನೊ ಬಯಸಿದೆ ಅಂತ. ಅದನ್ನ ನೀವು ಹೆಂಗ್ ಗೆಸ್ ಮಾಡಿದ್ರಿ? ನನ್ನ ಮನಸಲ್ಲಿ ಅದಿದೆ ಅಂತ ನಿಮಗೆ ಹ್ಯಾಗ್ ಗೊತ್ತಾಯ್ತು? ಅವಾಗ ನೀಮಗೇನು ಅನಿಸ್ತು ಅಂತ ಹೇಳ್ತಿರಾ?'

'ಹೂಂ, ಅಂತೂ ಈಗ ವಿಷಯಕ್ಕೆ ಬಂದ್ರಿ. ನೀವು ನನಗೆ ಈ ಮಾತನ್ನ ಕೇಳೇ ಕೇಳ್ತಿರಿ ಅನ್ಕೊಂಡಿದ್ದೆ. ಕೇಳೇಬಿಟ್ರಿ' ಎಂದು ಮೇದಿನಿ ಗಂಭೀರವಾದಳು. ಅವನು ಅವಳ ಮಾತನ್ನೇ ಗಮನವಿಟ್ಟು ಆಲಿಸಿದ. ಅವಳು ಮುಂದುವರಿಸಿದಳು.

'ಸ್ನೇಹ ಅನ್ನೋದು ಒಂದು ನಿಷ್ಕಲ್ಮಶ, ಪವಿತ್ರವಾದ ಸಂಬಂಧ. ಅದರಲ್ಲೂ ಗಂಡುಹೆಣ್ಣಿನ ನಡುವಿನ ಸ್ನೇಹ ಸಂಬಂಧ ತುಂಬಾ ಸೂಕ್ಷ್ಮವಾದದ್ದು. ಹಾಗಾಗಿ ಅದನ್ನ ಎಷ್ಟು ವಿವೇಕದಿಂದ ನಿಭಾಯಿಸ್ತೀವೋ ಅಷ್ಟೇ ಸ್ವಸ್ಥವಾಗಿರ್ತದೆ. ಸ್ವಲ್ಪ ವ್ಯತ್ಯಾಸವಾದ್ರೂ ಅದು ನಿಲ್ಲೋದಿಲ್ಲ. ಅದೂ ಅಲ್ಲದೆ ಸ್ನೇಹದ ನೆಪದಲ್ಲಿ ಮುಸುಕಿನಲ್ಲಿ ಇಬ್ಬರ ನಡುವೆ ದೈಹಿಕ ಆಕರ್ಷಣೆ ಕೆಲಸ ಮಾಡ್ತಿದ್ರೆ ಅದರ ಪರಿಣಾಮ ಏನಾಗಬಹುದು ಅನ್ನೋದನ್ನ ಊಹೆ ಮಾಡೋದಕ್ಕಾಗೊದಿಲ್ಲ. ನಿಮ್ಮ ಮಾತುಗಳಲ್ಲಿ ಯಾವಾಗ